ಪಿಡಬ್ಲ್ಯೂಃ 2

ಇಂದು ದಿನಾಂಕಃ 09.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 1, 2 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಪಿ.ಹೆಚ್.ಪಿ. ವಕೀಲರಿಂದಃ

1. ನಿಪಿ-1 ಕ್ಕೆ ನನ್ನ ಸಹಿಯನ್ನು ಫಕ್ಕೀರಪ್ಪ ಅವರ ಮನೆಯಲ್ಲಿ ಹಾಕಿರುತ್ತೇನೆ. ನಾನು ಸಹಿ ಮಾಡುವ ಕಾಲಕ್ಕೆ ನಿಪಿ-1ರ ದಾಖಲಾತಿಯಲ್ಲಿ ಬರವಣಿಗೆ ಅಥವಾ ಅಂಶಗಳನ್ನು ಬರೆಯಲಾಗಿತ್ತು.ನಿಪಿ-1ರ ಮೃತ್ಯು ಪತ್ರಕ್ಕೆ ಬೆಳಿಗ್ಗೆ10-00 ಗಂಟೆಯ ಸಮಯದಲ್ಲಿ ಸಹಿಯನ್ನು ಹಾಕಿರುತ್ತೇನೆ. ನಾನು ನನ್ನ ಮನೆಯಲ್ಲಿದ್ದಾಗ 3 ನೇ ಪ್ರತಿವಾದಿಯು ಬೆಳಿಗ್ಗೆ 9-30ರ ಸಮಯದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಆಕೆಯು ನನ್ನ ಅಜ್ಜ ಫಕ್ಕೀರಪ್ಪ ಅವರು ಕರೆಯುತ್ತಿದ್ದಾರೆ ಎಂದು ಕರೆದುಕೊಂಡು ಹೋಗಿರುತ್ತಾರೆ.

2. ನನ್ನ ಮನೆಗೂ ಫಕ್ಕೀರಪ್ಪ ಅವರ ಮನೆಗಳ ನಡುವೆ 3 ಮನೆಗಳು ಇರುತ್ತವೆ. ನಾನು ಫಕ್ಕೀರಪ್ಪ ಅವರ ಮನೆಗೆ ಹೋಗುವುದಕ್ಕೂ ಮೊದಲೇ ಮೃತ್ಯು ಪತ್ರದಲ್ಲಿರುವ ಅಂಶಗಳನ್ನು ಬರೆಯಲಾಗಿತ್ತು. ನಾನು ಫಕ್ಕೀರಪ್ಪ ಅವರ ಮನೆಗೆ ಹೋಗುವುದಕ್ಕೂ ಮೊದಲೇ ಮೃತ್ಯು ಪತ್ರವನ್ನು ಬರೆದಿದ್ದರಿಂದ ಅದರಲ್ಲಿರುವ ವಿವರಗಳನ್ನು ಯಾರು ಮಾಹಿತಿ ನೀಡಿ ಬರೆಸಿರುತ್ತಾರೆ ಮತ್ತು ಯಾರು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

3. ನಾನು ಸಹಿ ಮಾಡಿದ ಎಷ್ಟು ಸಮಯದವರೆಗೆ ಫಕ್ಕೀರಪ್ಪಅವರ ಮನೆಯಲ್ಲಿ ಇದ್ದೆ ಎಂಬುವ ವಕೀಲರ ಸೂಚನೆಗೆ ಸಾಕ್ಷಿಯು ನಾನು ಫಕ್ಕೀರಪ್ಪ ಅವರ ಮನೆಗೆ 10-00 ಗಂಟೆಗೆ ಹೋಗಿದ್ದು, ಅಲ್ಲಿಯೇ ಸುಮಾರು 2 ರಿಂದ 3 ಗಂಟೆ ಇದ್ದು, ಸುಮಾರು 1-00 ಗಂಟೆಗೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಕ್ಕೀರಪ್ಪ ಅವರ ಮನೆಗೆ ಹೋದಾಗ ಸಿದ್ದಲಿಂಗಮ್ಮ (3 ನೇ ಪ್ರತಿವಾದಿ), ನಾಗರಾಜ ಬ್ಯಾಡಗಿ, ಅರ್ಜುನಪ್ಪ ಮಜ್ಜರ ಮತ್ತು ವಕೀಲರು ಹಾಜರಿದ್ದರು. ಜೋಕನಾಳ ವಕೀಲರು ಫಕ್ಕೀರಪ್ಪ ಅವರ ಮನೆಯಲ್ಲಿ ಎಷ್ಟು ಸಮಯದವರೆಗೆ ಇದ್ದರು ಎಂದು ನನಗೆ ಗೊತ್ತಿಲ್ಲ.

4. ನಿಪಿ-1ರ ಮೃತ್ಯು ಪತ್ರಕ್ಕೆ ಮೊದಲು 3 ನೇ ಪ್ರತಿವಾದಿಯು ಸಹಿ ಮಾಡಿದ್ದು, ನಂತರ ನಾನು ಸಹಿ ಮಾಡಿರುತ್ತೇನೆ. ನಾವಿಬ್ಬರು ಸಹಿ ಮಾಡಿದ ನಂತರ ನಾಗರಾಜ ಬ್ಯಾಡಗಿ ಮತ್ತು ಅರ್ಜುನಪ್ಪ ಮಜ್ಜರ ಎಂಬ ವ್ಯಕ್ತಿಗಳು ಮೃತ್ಯು ಪತ್ರಕ್ಕೆ ಸಹಿ ಮಾಡಿರುತ್ತಾರೆ ನಾನು ಮತ್ತು ಸದರಿ ವ್ಯಕ್ತಿಗಳು ಮೃತ್ಯು ಪತ್ರಕ್ಕೆ ಸಹಿ ಮಾಡುವ ಮೊದಲೇ ಫಕ್ಕೀರಪ್ಪ ಸಹಿ ಮಾಡಿದ್ದರು ಮೃತ್ಯು ಪತ್ರಕ್ಕೆ ನನ್ನ ಸಮಕ್ಷಮ ಫಕ್ಕೀರಪ್ಪ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ.

5. ಮೃತ್ಯು ಪತ್ರಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕುವ ದಿನ ಫಕ್ಕೀರಪ್ಪ ಆರೋಗ್ಯದಿಂದ ಓಡಾಡಿಕೊಂಡು ಇದ್ದರು. ಫಕ್ಕೀರಪ್ಪ ಅವರು ಮೃತ್ಯು ಪತ್ರವನ್ನು ಬರೆಯುವ ಕಾಲಕ್ಕೆ ಯಾವುದೇ ಕಾಯಿಲೆಗಳಿಂದ ಬಳಲುತ್ತಿರಲಿಲ್ಲ. ಫಕ್ಕೀರಪ್ಪ ಅವರು ಮೃತ್ಯು ಪತ್ರ ಬರೆಯುವ ದಿನದಲ್ಲಿ ಮನೆಯಲ್ಲಿ ಊರುಗೋಲನ್ನು ಹಿಡಿದುಕೊಂಡು ಓಡಾಡುತ್ತಿದ್ದರು. ಫಕ್ಕೀರಪ್ಪ ಅವರು ಮೃತ್ಯು ಪತ್ರ ಬರೆಸುವ ಪೂರ್ವದಲ್ಲಿ ಅದರ ಬಗ್ಗೆ ನನ್ನೊಂದಿಗೆ ವಿಷಯಗಳನ್ನು ಮಾತನಾಡಿರುವುದಿಲ್ಲ ನಾನು ಸದರಿ ಫಕ್ಕೀರಪ್ಪ ಅವರನ್ನು ಯಾವ ಕಾರಣಕ್ಕೆ ಮೃತ್ಯುಪತ್ರವನ್ನು ಬರೆಯುತ್ತಿರುವೆ ಎಂದು ವಿಚಾರ ಮಾಡಿರುತ್ತೇನೆ. ಫಕ್ಕೀರಪ್ಪ ಅವರು ಆತನನ್ನು ಚೆನ್ನಾಗಿ ನೋಡಿಕೊಂಡ ವ್ಯಕ್ತಿಗಳಿಗೆ ಮತ್ತು ದಾವಾ ಆಸ್ತಿಗೆ ಮುಂದೆ ತಂಟೆ ತಕರಾರುಗಳು ನನ್ನ ಮಕ್ಕಳುಗಳ ನಡುವೆ ಬರಬಾರದು ಎಂದು ಮೃತ್ಯು ಪತ್ರವನ್ನು ಬರೆಯುತ್ತಿದ್ದೇನೆ ಎಂದು ಹೇಳಿರುತ್ತಾರೆ

6. ಫಕ್ಕೀರಪ್ಪ ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳ ಸರ್ವೇ ನಂಬರಗಳು ಮತ್ತು ಅವುಗಳ ವಿಸ್ತೀರ್ಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಫಕ್ಕೀರಪ್ಪ ಅವರಿಗೆ 1 ನೇ ಪ್ರತಿವಾದಿ ಹಾಗೂ 4 ಮತ್ತು 5 ನೇ ಪ್ರತಿವಾದಿಗಳು ಮಕ್ಕಳು ಇರುತ್ತಾರೆ. ಆತನಿಗೆ 2 ಮತ್ತು 6 ನೇ ಪ್ರತಿವಾದಿಗಳು ಹೆಣ್ಣುಮಕ್ಕಳು. 1 ಮತ್ತು 2 ನೇ ಪ್ರತಿವಾದಿಯರು ಅಸಲು ದಾವಾ ಸಂಖ್ಯೆ: 132/2012 ರಂತೆ ಅವರ ಸಹೋದರ, ಸಹೋದರಿಯರ ಮತ್ತು ಫಕ್ಕೀರಪ್ಪನ ಮೇಲೆ ದಾವೆಯನ್ನು ಸಲ್ಲಿಸಿರುವ ವಿಚಾರವನ್ನು ಫಕ್ಕೀರಪ್ಪನವರು ಮೃತ್ಯು ಪತ್ರವನ್ನು ಬರೆಯುವ ಸಮಯಕ್ಕೆ ನನಗೆ ತಿಳಿಸಿರುತ್ತಾರೆ

7. ಫಕ್ಕೀರಪ್ಪ ಮತ್ತು 3 ನೇ ಪ್ರತಿವಾದಿಯು ಒಂದೇ ಮನೆಯಲ್ಲಿ ವಾಸವಿದ್ದರು. ಫಕ್ಕೀರಪ್ಪ ಮತ್ತು 3 ನೇ ಪ್ರತಿವಾದಿ ವಾಸವಿದ್ದ ಮನೆಯಲ್ಲಿ 4 ನೇ ಪ್ರತಿವಾದಿಯೂ ಸಹ ವಾಸವಿದ್ದರು. ಅವರು ಎಷ್ಟು ವರ್ಷಗಳಿಂದ ಒಟ್ಟಿಗೆ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯು ಬೇರೊಂದು ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಫಕ್ಕೀರಪ್ಪ ಅವರಿಗೆ 5 ನೇ ಪ್ರತಿವಾದಿಯ ಮೇಲೆ ಮತ್ತು ಆತನ ಮಗ ವಾದಿಯ ಮೇಲೆ ವಿಶೇಷ ಕಾಳಜಿ ಏನಾದರೂ ಇತ್ತೇ ಎಂಬ ವಕೀಲರ ಸೂಚನೆಗೆ ಸಾಕ್ಷಿಯು ಹೌದು ಎಂದು ನುಡಿದು ಫಕ್ಕೀರಪ್ಪ ಅವರನ್ನು 5 ನೇ ಪ್ರತಿವಾದಿ ಮತ್ತು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

8. ನಿಪಿ-1 ರ ಮೃತ್ಯು ಪತ್ರದಲ್ಲಿ 2018 ರ ಜನೇವರಿ ಮಾಹೆಯಲ್ಲಿ ಬರೆಯಲಾಗಿತ್ತು ಮತ್ತು ಜನೇವರಿ ತಿಂಗಳ ದಿನಾಂಕಃ 26 ಅಥವಾ 27 ನೇ ದಿನಾಂಕದಂದು ಬರೆದಿರಬಹುದು. ನನಗೆ ನಿಪಿ-1 ರಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಮೃತ ಫಕ್ಕೀರಪ್ಪ ಅವರು ಮೃತ್ಯು ಪತ್ರದ ವಿಚಾರಗಳ ಬಗ್ಗೆ ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಫಕ್ಕೀರಪ್ಪ ಅವರು ಮೃತ್ಯು ಪತ್ರವನ್ನು ಬರೆದ ನಂತರದ ತಿಂಗಳಲ್ಲೇ ಮೃತಪಟ್ಟಿರುತ್ತಾರೆ.

9. ಫಕ್ಕೀರಪ್ಪ ಅವರಿಗೆ ಮೃತಪಡುವ ಪೂರ್ವದಲ್ಲಿ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಕಿವಿಗಳು ಸರಿಯಾಗಿ ಕೇಳುತ್ತಿರಲಿಲ್ಲ ಮತ್ತು ಕಣ್ಣುಗಳು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ವಾದಿಗೆ ಮೃತ್ಯು ಪತ್ರದ ಮುಖಾಂತರ ನೀಡುವ ಯಾವುದೇ ಇಚ್ಛೆಯು ಫಕ್ಕೀರಪ್ಪ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-1ರ ಮೃತ್ಯು ಪತ್ರವನ್ನು ಬರೆಯುವ ಸಮಯದಲ್ಲಿ 5 ನೇ ಪ್ರತಿವಾದಿಯಾಗಲೀ ಹಾಗೂ ವಾದಿಯಾಗಲೀ ಫಕ್ಕೀರಪ್ಪ ಅವರ ಮನೆಯಲ್ಲಿ ಇರಲಿಲ್ಲ.

10. 5 ನೇ ಪ್ರತಿವಾದಿ ನನ್ನೊಂದಿಗೆ ಚೆನ್ನಾಗಿದ್ದಾರೆ ಎಂದರೆ ಸರಿ. ಮೃತ್ಯು ಪತ್ರವನ್ನು ಬರೆಯಲು ಫಕ್ಕೀರಪ್ಪ ಅವರಿಗೆ ಯಾವುದೇ ಪ್ರಸಂಗ ಉದ್ಭವಿಸಿಲ್ಲವಾದರೂ 5 ನೇ ಪ್ರತಿವಾದಿ, ನಾನು ಮತ್ತು ಸಿದ್ದಲಿಂಗಮ್ಮ ಮತ್ತು ಇತರ ಸಾಕ್ಷಿದಾರರು ಮೋಸದಿಂದ ನಿಪಿ-1ರ ಮೃತ್ಯು ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ ನಾನು ನಿಪಿ-1ರ ದಾಖಲೆಗೆ ನನ್ನ ಸಹಿಯನ್ನು ಹಾಕಿರುವ ವಿಷಯವನ್ನು ಹೊರತುಪಡಿಸಿ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿರುವ ಇತರ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಆರ್.ಎಲ್. ವಕೀಲರಿಂದಃ

ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

ಇಂದು ದಿನಾಂಕಃ 09.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** 1, 2 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಪಿ.ಹೆಚ್.ಪಿ. ವಕೀಲರಿಂದಃ

1. ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ 1 ಮತ್ತು 2 ನೇ ಪ್ರತಿವಾದಿಗಳು ಅವರ ತಂದೆ-ತಾಯಿ ಹಾಗೂ ಸಹೋದರ-ಸಹೋದರಿಯ ಮೇಲೆ ಅಸಲು ದಾವಾ ಸಂಖ್ಯೆಃ 132/2012 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ ನಾನು ಹಾಜರಾಗಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಲ್ಲಿಸಿದ್ದ ಪ್ರತಿವಾದ ಪತ್ರದ ಬಗ್ಗೆ ಮಾಹಿತಿ ಇದೆ ಸದರಿ ಪ್ರತಿವಾದ ಪತ್ರದಲ್ಲಿ ಈ ಪ್ರಸ್ತುತ ದಾವಾ ಆಸ್ತಿಗಳು ಫಕ್ಕೀರಪ್ಪ ಅವರ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿ ಬರೆಸಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ನನಗೆ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಕುಲಸ್ಥರು ಎಂದು ನುಡಿಯುತ್ತಾರೆ.

2. ನಿಪಿ-1 ರ ಮೃತ್ಯು ಪತ್ರವನ್ನು ತಯಾರಿಸಬೇಕೆಂದು ಫಕ್ಕೀರಪ್ಪ ಅವರೆ ನನಗೆ ದೂರವಾಣಿ ಕರೆ ಮಾಡಿ ಕರೆಸಿರುತ್ತಾರೆ. ನಾನು ಫಕ್ಕೀರಪ್ಪ ಅವರ ಮನೆಗೆ ಹಾಜರಾದಾಗ ಸುಮಾರು ಬೆಳಿಗ್ಗೆ 10-30 ರ ಸಮಯವಾಗಿತ್ತು. ನಾನು ಫಕ್ಕೀರಪ್ಪ ಅವರ ಮನೆಗೆ ಹಾಜರಾಗುವ ಪೂರ್ವದಲ್ಲಿಯೇ 3 ನೇ ಪ್ರತಿವಾದಿ ಸಿದ್ಧಲಿಂಗಪ್ಪ, ನಾಗರಾಜ ಬಣಕಾರ, ನಾಗರಾಜ ಬ್ಯಾಡಗಿ ಮತ್ತು ಅರ್ಜುನಪ್ಪ ಅವರು ಹಾಜರಿದ್ದರು. ನಾನು ಫಕ್ಕೀರಪ್ಪ ಅವರ ಮನೆಗೆ ಹೋದಾಗ ಫಕ್ಕೀರಪ್ಪ ಅವರು ಪ್ರಸ್ತುತ 1 ಮತ್ತು 2 ನೇ ಪ್ರತಿವಾದಿಯರು ಸಲ್ಲಿಸಿರುವ ಅಸಲು ದಾವಾ ಸಂಖ್ಯೆಃ 132/2012 ರ ದಾವಾ ಆಸ್ತಿಗಳಲ್ಲಿ ನನಗೆ ಬರಬೇಕಾದ ಹಿಸ್ಸೆಯ ಹಕ್ಕಿಗೆ ಸಂಬಂಧಿಸಿದಂತೆ ಮೃತ್ಯು ಪತ್ರವನ್ನು ಬರೆಯಬೇಕೆಂದು ತಿಳಿಸಿರುತ್ತಾರೆ

3. ನಾನು ಮೃತ್ಯು ಪತ್ರವನ್ನು ಮೊದಲಿಗೆ ಮೃತ ಫಕ್ಕೀರಪ್ಪ ಅವರು ಹೇಳಿದ ಹಾಗೆ ಒಂದು ಬಿಳಿಯ ಹಾಳೆಯಲ್ಲಿ ಆತನ ಮನೆಯಲ್ಲಿ ಕಚ್ಚಾ ರೂಪದಲ್ಲಿ ಬರೆದುಕೊಂಡಿರುತ್ತೇನೆ. ಸದರಿ ಬಿಳಿಯ ಹಾಳೆಗೆ ನಾನು ಫಕ್ಕೀರಪ್ಪ ಅವರ ಸಹಿಯನ್ನು ಪಡೆದಿರುವುದಿಲ್ಲ. ಮೇಲಿನಂತೆ ಬರೆದುಕೊಂಡ ಕಚ್ಚಾ ರೂಪದ ಮೃತ್ಯು ಪತ್ರದ ಬರವಣಿಗೆಯು ನನ್ನ ಬಳಿ ಇರುವ ಬಗ್ಗೆ ನೆನಪಿಲ್ಲ

4. ನಾನು ಮೃತ್ಯು ಪತ್ರದ ಕಚ್ಚಾ ರೂಪದ ಅಂಶಗಳನ್ನು ಬರೆಯುವ ಪೂರ್ವದಲ್ಲಿ ಪೂರಕವಾಗಿ ಅಸಲು ದಾವಾ ಸಂಖ್ಯೆಃ 132/2012 ರ ದಾಖಲೆಗಳು ಮತ್ತು ಅದರಲ್ಲಿ ನಮೂದು ಮಾಡಿದ ದಾವಾ ಆಸ್ತಿಗಳ ಬಗ್ಗೆ ನೋಡಿರುತ್ತೇನೆ. ತದನಂತರ ಸದರಿ ದಾವೆಯಲ್ಲಿ ಆದ

ತೀರ್ಪು ಮತ್ತು ಆದೇಶದ ಪ್ರತಿಗಳನ್ನು ನೋಡಿರುತ್ತೇನೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳು ಮತ್ತು ಇತರೆ ಕಂದಾಯ ದಾಖಲಾತಿಗಳನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ದಾಖಲೆಗಳನ್ನು ಯಾರು ತಂದು ಕೊಟ್ಟರು ಎಂಬ ವಕೀಲರ ಸೂಚನೆಗೆ ಸಾಕ್ಷಿಯು ನಾನು ಅಸಲು ದಾವಾ ಸಂಖ್ಯೆ: 132/2012 ರ ದಾವೆಯನ್ನು ಸದರಿ ದಾವೆಯ ಪ್ರತಿವಾದಿಗಳ ಪರವಾಗಿ ನಡೆಸುತ್ತಿದ್ದರಿಂದ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ದಾಖಲಾತಿಗಳು ನನ್ನ ಬಳಿ ಇದ್ದವು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಹೊರತುಪಡಿಸಿ ಇನ್ನಿತರ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿ.

5. ಮೃತ್ಯು ಪತ್ರವನ್ನು ಬರೆದಿರುವ ದಸ್ತಾವೇಜು ಹಾಳೆಗಳು ನನ್ನ ಕಛೇರಿಯಲ್ಲೇ ಲಭ್ಯವಿದ್ದವು. ಫಕ್ಕೀರಪ್ಪ ಅವರಿಂದ ಮೃತ್ಯು ಪತ್ರ ಬರೆಯುವುದಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದು ಸದರಿ ವಿಷಯಗಳನ್ನು ಒಂದು ಕಚ್ಚಾ ಬಿಳಿಯ ಹಾಳೆಯಲ್ಲಿ ಬರೆದುಕೊಳ್ಳಲು ಸುಮಾರು 1 ಗಂಟೆಯ ಕಾಲ ಸಮಯ ತೆಗೆದುಕೊಂಡಿರುತ್ತೇನೆ. ಸದರಿ ಮಾಹಿತಿಗಳನ್ನು ತೆಗೆದುಕೊಂಡ ನಂತರ ನಾನು ಫಕ್ಕೀರಪ್ಪ ಮನೆಯನ್ನು ಬೆಳಿಗ್ಗೆ 11-30 ರ ಸಮಯಕ್ಕೆ ಹೊರಟಿರುತ್ತೇನೆ. ನಂತರ ನಾನು ಕೋಡಮಗ್ಗಿಯಿಂದ ನೇರವಾಗಿ ರಟ್ಟಿಹಳ್ಳಿಯ ನನ್ನ ಕಛೇರಿಗೆ ಹೋಗಿರುತ್ತೇನೆ ಎಂದರೆ ಸರಿ. ರಟ್ಟಿಹಳ್ಳಿಯಿಂದ ಕೋಡಮಗ್ಗಿಯ ನಡುವೆ 13 ಕಿ.ಮೀ.ಗಳ ಅಂತರ ಇದೆ ಎಂದರೆ ಸರಿ. ನಾನು ರಟ್ಟಿಹಳ್ಳಿಯಲ್ಲಿರುವ ನನ್ನ ಕಛೇರಿಯನ್ನು ತಲುಪಿದ್ದಾಗ ಮಧ್ಯಾಹ್ನ 12-00 ಗಂಟೆ ಆಗಿತ್ತು. ಮೃತ್ಯು ಪತ್ರದಲ್ಲಿರುವ ಒಕ್ಕಣೆಗಳನ್ನು ಬೆರಳಚ್ಚು ಮಾಡಿ ಮೃತ್ಯು ಪತ್ರದ ಪ್ರಿಂಟನ್ನು ತೆಗೆದುಕೊಳ್ಳಲು ಸುಮಾರು 20 ನಿಮಿಷಗಳ ಅವಧಿ ತೆಗೆದುಕೊಂಡಿರುತ್ತದೆ. ನನ್ನ ಕಛೇರಿಯಲ್ಲಿ ಮೃತ್ಯು ಪತ್ರವನ್ನು ತಯಾರಿಸುವಾಗ ಯಾರು ಇರಲಿಲ್ಲ ಎಂದರೆ ಸರಿ (ಮೃತ್ಯು ಪತ್ರವನ್ನು ತಯಾರು ಮಾಡಲು ಫಕ್ಕೀರಪ್ಪ ಅವರಿಂದ ಮಾಹಿತಿ ಪಡೆದು ನಂತರ ನನ್ನ ಕಛೇರಿಗೆ ಬಂದು ಅದನ್ನು ಕಛೇರಿಯಲ್ಲಿ ತಯಾರು ಮಾಡಿರುತ್ತೇನೆ ಎಂದು ಮೃತ್ಯು ಪತ್ರದಲ್ಲಿ ಷರಾ ಬರೆಯಲು ತೊಂದರೆ ಇತ್ತಾ ಎಂದು ವಕೀಲರು ಸೂಚಿಸಿದ್ದು, ಸದರಿ ಸೂಚನೆಯು ಪ್ರಕರಣದ ವಿಷಯಗಳನ್ನು ತೀರ್ಮಾನಿಸಲು ಸುಸಂಬದ್ಧವಲ್ಲದ ಕಾರಣ ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.)

6. ನಾನು ನಿಪಿ-1 ರ ಮೃತ್ಯು ಪತ್ರವನ್ನು ನನ್ನ ಕಛೇರಿಯಲ್ಲಿ ತಯಾರು ಮಾಡಿ ಕೋಡಮಗ್ಗಿಯಲ್ಲಿರುವ ಫಕ್ಕೀರಪ್ಪ ಅವರ ಮನೆಗೆ ತಲುಪಿದಾಗ ಮಧ್ಯಾಹ್ನ 1-00 ಗಂಟೆ ಸಮಯವಾಗಿತ್ತು. ನಾನು ಫಕ್ಕೀರಪ್ಪ ಅವರ ಮನೆಗೆ ಸದರಿ ಸಮಯಕ್ಕೆ ಮತ್ತೆ ಹಾಜರಾದಾಗ ಅವರ ಮನೆಯಲ್ಲಿ ಸಿದ್ದಲಿಂಗಮ್ಮ, ನಾಗರಾಜ ಬಣಕಾರ, ಅರ್ಜುನಪ್ಪ ಮತ್ತು ನಾಗರಾಜ ಬ್ಯಾಡಗಿ ಅವರು ಅಲ್ಲಿಯೇ ಇದ್ದರು. ಫಕ್ಕೀರಪ್ಪ ಅವರ ಮನೆಗೆ ಪುನಃ ಹಾಜರಾಗಿ ನಾನು ತಯಾರು ಮಾಡಿ ತಂದಿದ್ದ ನಿಪಿ-1 ರ ಮೃತ್ಯು ಪತ್ರದ ಒಕ್ಕಣೆಗಳನ್ನು ಫಕ್ಕೀರಪ್ಪ ಅವರಿಗೆ ಓದಿ ಹೇಳಿರುತ್ತೇನೆ

ನಿಪಿ-1ರ ಮೃತ್ಯುಪತ್ರಕ್ಕೆ ಮೊದಲಿಗೆ ಫಕ್ಕೀರಪ್ಪ ಅವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ನಂತರದಲ್ಲಿ ಮೃತ್ಯು ಪತ್ರಕ್ಕೆ ಸಿದ್ದಲಿಂಗಮ್ಮ, ನಾಗರಾಜ ಬಣಕಾರ ಅವರ ನಂತರ ನಾಗರಾಜ ಬ್ಯಾಡಗಿ ಮತ್ತು ಕಡೆಗೆ ಅರ್ಜುನಪ್ಪ ಅವರು ಕ್ರಮವಾಗಿ ತಮ್ಮ ಸಹಿಗಳನ್ನು ಹಾಕಿರುತ್ತಾರೆ ಸದರಿಯವರೆಲ್ಲರೂ ನಿಪಿ-1ರ ದಾಖಲೆಗೆ ಸಹಿ ಮಾಡಿದ ನಂತರ ಕಡೆಯದಾಗಿ ನಾನು ನನ್ನ ದಸ್ತೂರ ಸಹಿಯನ್ನು ಹಾಕಿ ಸೀಲ್‌ನ್ನು ಹಾಕಿರುತ್ತೇನೆ. ನಿಪಿ-1ರ ದಾಖಲೆಯ ಒಕ್ಕಣೆಗಳನ್ನು ಫಕ್ಕೀರಪ್ಪ ಅವರಿಗೆ ಓದಿ ಹೇಳಿದ ನಂತರ ದಾಖಲೆಗೆ ಸಹಿ ಮಾಡಿಸಿರುತ್ತೇನೆ ಎಂದು ಷರಾವನ್ನು ಬರೆದಿರುವುದಿಲ್ಲ ಎಂದರೆ ಸರಿ.

7. ನಿಪಿ-1ರ ದಾಖಲೆಯಲ್ಲಿ ನಾನು ಮೃತ್ಯು ಪತ್ರವನ್ನು ಪಕ್ಷಕಾರರ ಮಾಹಿತಿಯ ಮೇರೆಗೆ ತಯಾರಿಸಲಾಗಿದೆ ಎಂದು ಒಕ್ಕಣೆ ಇದೆ ಎಂದರೆ ಸರಿ. ಸದರಿ ಒಕ್ಕಣೆಯಲ್ಲಿ ನಮೂದು ಮಾಡಿರುವ ಪಕ್ಷಕಾರರ ಎಂಬ ಪದವು ಫಕ್ಕೀರಪ್ಪ ಅವರಿಗೆ ಸಂಬಂಧಿಸಿದ್ದು ಆಗಿರುತ್ತದೆ. ಪಕ್ಷಕಾರರು ಎಂದರೆ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳು ಎಂದರೆ ಸಾಕ್ಷಿಯು ನಾನು ಫಕ್ಕೀರಪ್ಪ ಅವರನ್ನು ಬಹುವಚನದಿಂದ ಕರೆದು ಪಕ್ಷಕಾರರು ಎಂದು ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-1ರ ದಸ್ತಾವೇಜು ಹಾಳೆಯಲ್ಲಿ ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ ಎಂದು ನಮೂದಿದ್ದು, ಅದರ ಮುಂದೆ ದಸ್ತಾವೇಜು ಬರೆದ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-1ರ ಮೃತ್ಯು ಪತ್ರದ ಆಸ್ತಿ ತಪಸ್ಸಿಲಿನಲ್ಲಿ ಸರ್ವೆ ನಂಬರಃ 4 ಕ್ಷೇತ್ರವನ್ನು ತಿದ್ದುಪಡಿ ಮಾಡಿದ್ದು, ಅದನ್ನು ತಿದ್ದುಪಡಿ ಮಾಡಲಾಗಿದೆ ಎಂದು ಷರಾ ಬರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ತಿದ್ದುಪಡಿಗೆ ಸಂಬಂಧಿಸಿದಂತೆ ತನ್ನ ಚೋಟಾ ಸಹಿಯನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1ರ ಮೃತ್ಯು ಪತ್ರವನ್ನು ಸಂಪೂರ್ಣವಾಗಿ ಓದಿ ಹೇಳಿ ಸಹಿಗಳನ್ನು ಪಡೆದು ಪೂರ್ಣಗೊಳಿಸುವ ಸಮಯವು ಮಧ್ಯಾಹ್ನ 2 ಗಂಟೆಯ ಅವಧಿಯವರೆಗೆ ಆಗಿರುತ್ತದೆ. ನಿಪಿ-1ರ ದಾಖಲೆಯನ್ನು ನೋಂದಾಯಿಸಿಕೊಳ್ಳುವಂತೆ ನಾನು ಫಕ್ಕೀರಪ್ಪ ಅವರಿಗ ಸಲಹೆಯನ್ನು ನೀಡಿದ್ದೆ.

8. ನಿಪಿ-1ರ ಮೃತ್ಯು ಪತ್ರವನ್ನು ಬರೆಯುವ ಪೂರ್ವದ 2 ವರ್ಷಗಳ ಹಿಂದೆಯಿಂದಲೂ ಫಕ್ಕೀರಪ್ಪ ಅವರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಫಕ್ಕೀರಪ್ಪ ಅವರಿಗೆ ಮೃತ್ಯು ಪತ್ರವನ್ನು ಬರೆಯುವ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ನನಗೆ ಸಂಬಂಧಿ ಆಗಬೇಕಾಗಿರುವುದರಿಂದ ಆಕೆಯ ಮಗ 5 ನೇ ಪ್ರತಿವಾದಿ ಮತ್ತು ಆತನ ಮಗ ವಾದಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೃತ್ಯು ಪತ್ರವನ್ನು ಬರೆಯುವ ಕಾಲಕ್ಕೆ ಅಸಲು ದಾವಾ ಸಂಖ್ಯೆಃ 132/2012ರಲ್ಲಿ ಆದ ಪ್ರಾಥಮಿಕ ಡಿಕ್ರಿಯ ಆಧಾರದ ಮೇಲೆ ಸಲ್ಲಿಸಿದ ಅಂತಿಮ ಡಿಕ್ರಿಯ ನಡಾವಳಿಯಲ್ಲಿ ಕೋರ್ಟ್

ಕಮೀಷನ್‌ರ ಅವರು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಎಫ್.ಡಿ.ಪಿ. ಸಂಖ್ಯೆ 18/2015 ರಲ್ಲಿ ನಾನು ಫಕ್ಕೀರಪ್ಪ ಅವರ ಪರವಾಗಿ ಕಮೀಷನರ್‌ರವರಿಗೆ ದಿನಾಂಕಃ 18.01.2018 ರಂದು ತಕರಾರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ತಕರಾರು ಸದರಿ ಎಪ್.ಡಿ.ಪಿ. ಸಂಖ್ಯೆ 18/2015 ರ ಮೂಲ ಅರ್ಜಿಗೆ ಸಲ್ಲಿಸಿದ ತಕರಾರು ಎಂದು ನುಡಿಯುತ್ತಾರೆ. ನಾನು ಮೃತ್ಯು ಪತ್ರವನ್ನು ಬರೆಯುವ ಕಾಲಕ್ಕೆ ಸದರಿ ಎಫ್.ಡಿ.ಪಿ. ಪ್ರಕರಣದಲ್ಲಿ ಫಕ್ಕೀರಪ್ಪ ರವರ ಕುಟುಂಬದ ಸದಸ್ಯರಿಗೆ ಪ್ರತ್ಯೇಕವಾಗಿ ಅವರವರ ಸ್ವಾಧೀನಕ್ಕೆ ಬರೆಬೇಕಾದ ಜಮೀನುಗಳನ್ನು ವಿಂಗಡಿಸಿ ವರದಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ವರದಿಯನ್ನು ಸಲ್ಲಿಸಿದ್ದು, ನನ್ನ ಗಣನೆಗೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಕ್ಕೀರಪ್ಪ ಅವರಿಗೆ ಸೇರಿದ 1/7 ರ ಹಿಸ್ಸೆಯ ಹಕ್ಕನ್ನು ವಾದಿಗೆ ಬರಬೇಕೆಂದು ನಾನು ಫಕ್ಕೀರಪ್ಪ ಅವರು ನಿಪಿ-1 ರಂತೆ ನನ್ನ ಮತ್ತು ಸಾಕ್ಷಿಗಳ ಸಮಕ್ಷಮ ಮೃತ್ಯು ಪತ್ರವನ್ನು ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಮೃತ್ಯು ಪತ್ರವನ್ನು ಫಕ್ಕೀರಪ್ಪ ಅವರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ

**ಪಾಟೀ ಸವಾಲುಃ** 3 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಆರ್.ಎಲ್. ವಕೀಲರಿಂದಃ

ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ರೇಕೆರೂರು.